ಕ್ರೆಡಿಟ್ ಕಾರ್ಡ್‌ನ ಬಗೆಗಿನ ಮುಖ್ಯವಾದ ಮಾಹಿತಿಗಳು

1. ಕ್ರೆಡಿಟ್ ಕಾರ್ಡ್‌ನ ಬಿಲ್ಲುಗಳ ಪಾವತಿ : ಕ್ರೆಡಿಟ್ ಕಾರ್ಡ್‌ನ ಬಿಲ್ಲುಗಳನ್ನು ಚೆಕ್, ಡ್ರಾಫ್ಟ್ ಅಥವಾ SCBನ ಎಟಿಎಮ್‌ನ ಮೂಲಕ ಹಣ ಪಾವತಿಸಬಹುದು ಅಥವಾ ಶಾಖೆಗಳು ಅಥವಾ ECS (ಇಲೆಕ್ಟ್ರಾನಿಕ್ ಕ್ಲಿಯರಿಂಗ್ ಸರ್ವಿಸ್) ನಿರ್ದೇಶನಗಳ ಮೂಲಕ ಸಂದಾಯ ಮಾಡಬಹುದು. ದಯವಿಟ್ಟು ನಿಮ್ಮ ಚೆಕ್ ಮತ್ತು ಡ್ರಾಫ್ಟ್‌ಗಳನ್ನು SCB ಅಕೌಂಟ್ ನಂಬರ್ XXXX XXXX XXXX XXXX (ನಿಮ್ಮ 16 ಅಂಕೆಯಿರುವ SCB ನಂಬರು)ನ ಮೂಲಕ ಪಾವತಿ ಮಾಡಬಹುದು. ನಿಮ್ಮ ಚೆಕ್/ಡ್ರಾಫ್ಟ್‌ಗಳು ಸಂಪೂರ್ಣವಾಗಿ ಎಲ್ಲಾ ವಿಧದಲ್ಲಿಯೂ ಹಾಗೂ ಅಲ್ಲಿನ ಯಾವುದೇ ಬದಲಾವಣೆಗಳಿಗೆ ತಕ್ಕಂತೆ ಸೈನ್ಡ್ ಆಫ್ ಮಾಡಲಾಗಿದೆಯ ಎಂದು ದಯವಿಟ್ಟು ಗಮನಿಸಿರಿ. ಹಣ ಪಾವತಿ ಮಾಡುವ ದಿನಾಂಕದ ಮೂರು ದಿನ ಮುಂಚಿತವಾಗಿ ನೀವು ಚೆಕ್ಕನ್ನು ಚೆಕ್ ಕಲೆಕ್ಷನ್ ಪೆಟ್ಟಿಗೆಗೆ ಹಾಕುವಂತೆ ನಾವು ಕೋರುತ್ತೇವೆ. ನಿಜವಾಗಿ ಪಾವತಿಸಿದ ದಿನಾಂಕವನ್ನು ಚೆಕ್‌ನಲ್ಲಿ ನಮೂದಿಸಿರಬೇಕು. ನಿಮ್ಮ ಕಾರ್ಡ್ ಅಕೌಂಟಿಗೆ ಹಣವನ್ನು ಸಮಯಕ್ಕೆ ಸರಿಯಾಗಿ ಕ್ರೆಡಿಟ್ ಆಗುವಂತೆ ಇದು ಮಾಡುತ್ತದೆ. ಪೇಮೆಂಟ್ ಡ್ಯೂ ಡೇಟ್‌ನ ಒಳಗೆ ಬ್ಯಾಂಕ್ ಹಣ ಪಾವತಿ ಪಡೆಯದಿದ್ದಲ್ಲಿ ಲೇಟ್ ಪೇಮೆಂಟ್ ಚಾರ್ಜ್ (ತಡ ಪಾವತಿ ಶುಲ್ಕ)ನ್ನು ವಿಧಿಸುವ ಹಕ್ಕನ್ನು ಬ್ಯಾಂಕ್ ಕಾಯ್ದುಕೊಂಡಿರುತ್ತದೆ. ರೂ. 20,000ಕ್ಕಿಂತ ಹೆಚ್ಚಿನ ಮೊತ್ತದ ಪರಿಮಿತಿಯನ್ನು ಚೆಕ್ ಕ್ಲಿಯರೆನ್ಸ್ ಆದ ಬಳಿಕ ಬಿಡುಗಡೆ ಮಾಡಲಾಗುತ್ತದೆ. ನಗದು ಹಣವನ್ನು ಕೇವಲ ಬ್ಯಾಂಕ್‌ನ ಶಾಖೆಗಳಲ್ಲಿ ಕಾರ್ಯಾಚರಣೆಯ ಸಮಯದಲ್ಲಿ ಡಿಪಾಸಿಟ್ ಮಾಡಬಹುದು. ದಯವಿಟ್ಟು ಚೆಕ್ ಕಲೆಕ್ಷನ್ ಬಾಕ್ಸ್‌ನಲ್ಲಿ ನಗದು ಹಣ ಡಿಪಾಸಿಟ್ ಮಾಡಬೇಡಿ.

2. ಬಡ್ಡಿ ವಿಧಿಸುವುದು : (ಹಳೆಯ ಸಾಲ ತೀರಿಸಲು ಮಾಸಿಕ ಪಾವತಿಯನ್ನು ಮೊದಲು ಅನ್ವಯ ಗೊಳಿಸಲಾಗುತ್ತದೆ ಎನ್ನುವುದನ್ನು ದಯವಿಟ್ಟು ಗಮನಿಸಿರಿ)

| ಐಚ್ಛಿಕ | ಬಡ್ಡಿಯನ್ನು ಹೇಗೆ ವಿಧಿಸಲಾಗುತ್ತದೆ | |
|---|---|---|
| 1. ಪೇಮೆಂಟ್ ಡ್ಯೂ ಡೇಟ್‌ನ ಮೊದಲು ಪ್ರತಿ ತಿಂಗಳು ಒಟ್ಟು ಬಾಕಿಯನ್ನು ಪೂರ್ತಿಯಾಗಿ ಪಾವತಿಸಿದಲ್ಲಿ | ಯಾವುದೇ ಬಡ್ಡಿ ವಿಧಿಸಲಾಗುವುದಿಲ್ಲ* | |
| 2. ಪೇಮೆಂಟ್ ಡ್ಯೂ ಡೇಟ್‌ನ ಮೊದಲು ಎಲ್ಲಾ ಬಾಕಿಯ ಆಂಶಿಕ ಪಾವತಿ ಮಾಡಿದಲ್ಲಿ | ಕರೆಂಟ್ ಸ್ಟೇಟ್‌ಮೆಂಟ್‌ನಲ್ಲಿ ಮಾಡಲ್ಪಟ್ಟ ಎಲ್ಲಾ ಟ್ರ್ಯಾನ್ಸ್‌ಝಾಕ್ಷನ್‌ಗಳಿಗೆ ಬಡ್ಡಿ ಹಾಕಲಾಗುತ್ತದೆ. ಇದು ಟ್ರ್ಯಾನ್ಸ್‌ಝಾಕ್ಷನ್ ದಿನಾಂಕದಿಂದ ಸ್ಟೇಟ್‌ಮೆಂಟ್ ದಿನಾಂಕದ ವರೆಗಿನ ಅವಧಿಗಾಗಿರುತ್ತದೆ.<br>ಹಿಂದಿನ ಸ್ಟೇಟ್‌ಮೆಂಟ್‌ನ ಕ್ಲೋಸಿಂಗ್ ಬ್ಯಾಲೆನ್ಸ್‌ಗೆ ಸ್ಟೇಟ್‌ಮೆಂಟ್ ದಿನಾಂಕದ ಒಂದು ದಿನದ ಬಳಿಕ ಕರೆಂಟ್ ಸ್ಟೇಟ್‌ಮೆಂಟ್‌ನ ಪಾವತಿ ದಿನಾಂಕದ ಒಂದು ದಿನ ಮೊದಲಿನ ತನಕ ಬಡ್ಡಿ ಹೇರಲಾಗುತ್ತದೆ. ಪಾವತಿಯಾದ ಬಳಿಕ ಉಳಿದ ಹಣಕ್ಕೆ ಪಾವತಿ ದಿನಾಂಕದಿಂದ ಸ್ಟೇಟ್‌ಮೆಂಟ್ ದಿನಾಂಕದವರೆಗೆ ಬಡ್ಡಿ ಇರುತ್ತದೆ. | ಹಿಂದಿನ ಸ್ಟೇಟ್‌ಮೆಂಟ್ ದಿನಾಂಕ ಆಗಸ್ಟ್ 1, ಸ್ಟೇಟ್‌ಮೆಂಟ್ ಬ್ಯಾಲೆನ್ಸ್ ರೂ. 10,000, ಪೇಮೆಂಟ್ ಡ್ಯೂ ದಿನಾಂಕ ಆಗಸ್ಟ್ 18, ಆಗಸ್ಟ್ 15 ರಂದು ಮಾಡಿದ ಟ್ರ್ಯಾನ್ಸ್‌ಝಾಕ್ಷನ್ ರೂ. 3000 ಪಾವತಿಸಿದ್ದು : ಆಗಸ್ಟ್ 18 ರಂದು ಪಡೆದ ಮೊತ್ತ ರೂ. 8000, ಕರೆಂಟ್ ಸ್ಟೇಟ್‌ಮೆಂಟ್ ದಿನಾಂಕ ಸೆಪ್ಟೆಂಬರ್ 1, ಈ ಸಂದರ್ಭದಲ್ಲಿ ರೂ. 10,000ಕ್ಕೆ ಆಗಸ್ಟ್ 2 ರಿಂದ ಆಗಸ್ಟ್ 17ರವರೆಗೆ ಹಾಗೂ ಪಾವತಿ ಮಾಡದ ಬಾಕಿ ಹಣ ರೂ. 2000ಕ್ಕೆ ಆಗಸ್ಟ್ 18 ರಿಂದ ಸೆಪ್ಟೆಂಬರ್ 1ರ ವರೆಗೆ ಬಡ್ಡಿ ವಿಧಿಸಲಾಗುತ್ತದೆ.<br>ಆಗಸ್ಟ್ 15ರಿಂದ ಸೆಪ್ಟೆಂಬರ್ 1ರ ವರೆಗೆ ರೂ. 3000ಕ್ಕೂ ಬಡ್ಡಿಯನ್ನು ವಿಧಿಸಲಾಗುತ್ತದೆ. |
| 3. ಸಾಮಾನ್ಯವಾಗಿ ನೀವು ಆಂಶಿಕ ಪಾವತಿ ಮಾಡಿದ್ದಲ್ಲಿ, ಆದರೆ ಸದ್ಯ ತಿಂಗಳಲ್ಲಿ ಪೇಮೆಂಟ್ ಡ್ಯೂ ದಿನಾಂಕದ ಮೊದಲೇ ಎಲ್ಲಾ ಪಾವತಿಯನ್ನು ಪೂರ್ತಿಯಾಗಿ ಪಾವತಿಸಿದ್ದಲ್ಲಿ | ನಿಮ್ಮ ಹಿಂದಿನ ಸ್ಟೇಟ್‌ಮೆಂಟ್ ಪ್ರಕಾರವಿರುವ ಕ್ಲೋಸಿಂಗ್ ಬ್ಯಾಲೆನ್ಸ್‌ಗೆ ಪಾವತಿ ದಿನಾಂಕದವರೆಗೆ ಬಡ್ಡಿ ಜಮೆಗೊಳ್ಳುತ್ತದೆ | ಹಿಂದಿನ ಸ್ಟೇಟ್‌ಮೆಂಟ್ ದಿನಾಂಕ ಆಗಸ್ಟ್ 1 ಕ್ಲೋಸಿಂಗ್ ಬ್ಯಾಲೆನ್ಸ್ ರೂ. 10,000, ಸದ್ಯದ ಬಾಲೆನ್ಸ್ ದಿನಾಂಕ ಸೆಪ್ಟೆಂಬರ್ 1, ಹಣ ಪಾವತಿಸಬೇಕಾದ ದಿನಾಂಕ ಆಗಸ್ಟ್ 18, ಪಾವತಿ : ಆಗಸ್ಟ್ 15ರಂದು ರೂ. 10,000 ಆಗಸ್ಟ್ 2 ರಿಂದ 14ರ ವರೆಗೆ (ಆಗಸ್ಟ್‌ನಲ್ಲಿರುವ 31 ದಿನಗಳಲ್ಲಿ 13 ದಿನಗಳಿಗೆ ರೂ. 10,000ಕ್ಕೆ ಬಡ್ಡಿ ಬೀಳುತ್ತದೆ. ^ |

*ನಗದು ಟ್ರ್ಯಾನ್ಸ್‌ಕ್ಷನ್ ಸೇರಿರುವುದಿಲ್ಲ. ^ ಈಸಂದರ್ಭದಲ್ಲಿ ಡೇಬಿಟ್ ಮಾಡಲಾಗುವ ಬಡ್ಡಿ = 10,000 X 3.1% X13/31 = ರೂ. 130.00

3. ವಾರ್ಷಿಕೀಕೃತ ಶೇಕಡಾವಾರು ದರ : ತಿಂಗಳಿನ ಬಡ್ಡಿಯ ದರವು ವಾರ್ಷಿಕೀಕೃತವಾಗಿ APR ಮೂಲಕ ಲೆಕ್ಕ ಹಾಕಲ್ಪಡುತ್ತದೆ. ನಗದು ಹಾಗೂ ಚಿಲ್ಲರೆ ಟ್ರ್ಯಾನ್ಸ್‌ಕ್ಷನ್ ನೆಲೆಯಲ್ಲಿ ತಿಂಗಳಿನ ಬಡ್ಡಿಯು 3.1% p.m. ವಾರ್ಷಿಕವಾಗಿ APRನಲ್ಲಿ 37.20% ಆಗಿರುತ್ತದೆ. ಈ ಬಡ್ಡಿ ದರವು ನಗದು ಹಾಗೂ ಚಿಲ್ಲರೆ ಎರಡೂ ಟ್ರ್ಯಾನ್ಸ್‌ಕ್ಷನ್‌ಗಳಲ್ಲಿ 2.49% p.m. (APR 29.88%) ನಿಂದ 3.40% p.m. (APR 40.80%) ರಷ್ಟು ಬದಲಾಗುತ್ತದೆ. ಬಡ್ಡಿದರವು ಯಾವಾಗ ಮತ್ತು ಹೇಗೆ ಅನ್ವಯವಾಗುತ್ತದೆ ಎನ್ನುವುದನ್ನು ಸ್ಟೇಟ್‌ಮೆಂಟ್‌ನ ಮೂಲಕ ನಿಮಗೆ ತಿಳಿಸಲಾಗುವುದು. ನಿಮ್ಮ ಕಾರ್ಡ್‌ನ ಬಳಕೆ ಹಾಗೂ ಮರುಪಾವತಿಯ ರೀತಿಯ ಆಧಾರದ ಮೇಲೆ ಬ್ಯಾಂಕ್ ತನ್ನ ಏಕೈಕ ತೀರ್ಮಾನದಂತೆ ಪ್ರತಿ ಮೂರು ತಿಂಗಳಿಗೊಮ್ಮೆ APRನ್ನು ಪರಿಶೀಲನೆ ಮಾಡಿ ನೇಮಿಸುತ್ತದೆ. ಸಂಪೂರ್ಣ ಪಾವತಿ ಮಾಡದಿದ್ದಲ್ಲಿ, ಕೊಡಬೇಕಾದ ದಿನಾಂಕದಂದು ಕನಿಷ್ಠ ಅಮೌಂಟ್ ಡ್ಯೂ (MAD) ಇದ್ದರೂ ಬಡ್ಡಿಯನ್ನು ಸಂಪೂರ್ಣ ಅಮೌಂಟ್ ಡ್ಯೂ (TAD)ಗೆ ವಿಧಿಸಲಾಗುವುದು. EMI ಕಾರ್ಡಿಗೆ ತಿಂಗಳ ಬಡ್ಡಿ ದರವು 2% ಆಗಿದ್ದು ವಾರ್ಷಿಕವಾಗಿ APRನಲ್ಲಿ 24% ಕಂಡು ಬರುತ್ತದೆ. ಇದು ಟ್ರ್ಯಾನ್ಸ್‌ಕ್ಷನ್ ರೂ. 2000ಕ್ಕಿಂತ ಮೇಲಿದ್ದಲ್ಲಿ ಮಾತ್ರ ಅನ್ವಯಿಸುತ್ತದೆ.

4. ಮಿನಿಮಮ್ ಅಮೌಂಟ್ ಡ್ಯೂ (MAD) (ಕೊಡಬೇಕಾದ ಕನಿಷ್ಠ ಮೊತ್ತ) : ಹಣ ಪಾವತಿಯಲ್ಲಿ ಯಾವುದೇ ರೀತಿಯ ಡಿಫಾಲ್ಟ್ (ಪಾವತಿಸಲು ತಪ್ಪುವಿಕೆ) ಇಲ್ಲದಿದ್ದಲ್ಲಿ ಬಿಲ್ಲಿನ ಆಧಾರದ ಮೇಲೆ ಪ್ರತಿ ತಿಂಗಳು ಶೇಕಡಾ 5 ರಷ್ಟು ಕನಿಷ್ಠ ಮೊತ್ತವನ್ನು ಕೊಡಬೇಕಾಗುತ್ತದೆ ಒಂದು ವೇಳೆ ಹಣ ಪಾವತಿಯಲ್ಲಿ ಯಾವುದೇ ರೀತಿಯ ಡಿಫಾಲ್ಟ್ ಆದಲ್ಲಿ ಕೊಡಬೇಕಾದ ಸಂಪೂರ್ಣ ಹಣದ ಮೊತ್ತವನ್ನು ಪಾವತಿಸಬೇಕಾಗುತ್ತದೆ. EMI ಕಾರ್ಡ್ ಅಥವಾ ಕಾರ್ಡ್ ಅಕೌಂಟ್‌ನಲ್ಲಿ ಸಾಲ ಪಡೆದಿದ್ದರೆ, EMIನ ಸಾಲವನ್ನು ಕೂಡ ಮೇಲಿನ ಮೊತ್ತಕ್ಕೆ ಸೇರ್ಪಡೆಗೊಳಿಸಲಾಗುವುದು. ಕಾರ್ಡ್‌ನ್ನು ಲಿಮಿಟ್‌ಗಿಂತ ಹೆಚ್ಚಾಗಿ ಉಪಯೋಗ ಮಾಡಿದ್ದಲ್ಲಿ, ಮೇಲೆ ನಮೂದಿಸಿದ ಕನಿಷ್ಠ ಪಾವತಿಯ ಮೊತ್ತಕ್ಕೆ ಲಿಮಿಟ್‌ಗಿಂತ ಅಧಿಕದ ಹಣವನ್ನು ಕೂಡಿಸಲಾಗುವುದು. ಒಂದು ವೇಳೆ ನೀವು ರೂ. 5000 ತೆಗೆದುಕೊಂಡಲ್ಲಿ ಕನಿಷ್ಠ ಕೊಡಬೇಕಾದ ಮೊತ್ತ (MAD) (ಕನಿಷ್ಠ ಮೊತ್ತ ರೂ. 100) ಪ್ರತಿ ತಿಂಗಳು ಕೊಟ್ಟಲ್ಲಿ 6 ವರ್ಷದಲ್ಲಿ ನೀವು ಕೋಡಬೇಕಾದ ಸಂಪೂರ್ಣ ಮೊತ್ತ ಮುಗಿಯುತ್ತದೆ. ಆದುದರಿಂದ ನಿಮ್ಮಲ್ಲಿ ಅಧಿಕ ಹಣ ಇದ್ದಲ್ಲಿ ಕೊಡಬೇಕಾದ ಕನಿಷ್ಠ ಮೊತ್ತಕ್ಕಿಂತ ಹೆಚ್ಚು ಹಣವನ್ನು ಕೊಡಬಹುದೆಂಬ ಸಲಹೆಯನ್ನು ನಾವು ಕೊಡಲು ಬಯಸುತ್ತೇವೆ.

- ಕಡಿಮೆ ಅವಧಿಯ ಕ್ರೆಡಿಟ್ ಅಗತ್ಯ/ದಿನ ನಿತ್ಯದ ಖರ್ಚುಗಳಿಗೆ ಕ್ರೆಡಿಟ್ ಕಾರ್ಡ್‌ಗಳು ಕ್ರೆಡಿಟ್ ಸಾಧನಗಳಾಗಿರುತ್ತದೆ. ದೀರ್ಘ ಕಾಲದ ಬಂಡವಾಳದ ಅಗತ್ಯವಿದ್ದಲ್ಲಿಯೂ ನಮ್ಮಲ್ಲಿ ವಿವಿಧ ಉತ್ಪನ್ನಗಳು ಲಭಿಸುತ್ತವೆ. ಹೆಚ್ಚಿನ ಮಾಹಿತಿಗಾಗಿ ನಮ್ಮ ಹೆಲ್ಪ್‌ಲೈನ್‌ಗೆ ಕರೆ ಮಾಡಿರಿ.

5. ಗರಿಷ್ಠ ಉಚಿತ ಬಡ್ಡಿ ಅವಧಿ : ಎಲ್ಲಾ ಗೋಲ್ಡ್ ಮತ್ತು ನಾನ್ ಗೋಲ್ಡ್ ಕಾರ್ಡ್‌ಗೆ SCB ಕಾರ್ಡ್‌ನ ಮೂಲಕ ಹಣ ಪಾವತಿ ಮಾಡಲು 18 ದಿನಗಳನ್ನು (18ನೇ ದಿನ ಆದಿತ್ಯವಾರವಾದಲ್ಲಿ 17 ದಿನಗಳ) ಸ್ಟೇಟ್‌ಮೆಂಟ್ ದಿನಾಂಕದಿಂದ ಕೊಡಲಾಗುವುದು. ಆದುದರಿಂದ ಇಲ್ಲಿ 17 ರಿಂದ 47 ದಿನಗಳ ಬಡ್ಡಿ ರಹಿತ ಕ್ರೆಡಿಟ್ ಅವಧಿಯು ಸಿಗುತ್ತದೆ. ಅಲ್ಲದೆ ಮುಂಗಡ ನಗದು ಹಣಕ್ಕೆ ಟ್ರ್ಯಾನ್ಸ್‌ಕ್ಷನ್ ಆದ ದಿನದಿಂದ ಬಡ್ಡಿಯನ್ನು ವಿಧಿಸಲಾಗುವುದು. ಮುಂಗಡ ಸೂಚನೆಯನ್ನು ಕೊಡುವ ಮೂಲಕ ಈ ಬಡ್ಡಿ ರಹಿತದ ಅವಧಿಯನ್ನು ಬದಲಾಯಿಸುವ ಹಕ್ಕನ್ನು ಬ್ಯಾಂಕ್ ಸದಾ ತನ್ನದಾಗಿಸಿಕೊಂಡಿರುತ್ತದೆ.

6. ಬಿಲ್ಲಿಂಗ್‌ನಲ್ಲಿ ವಿವಾದ ತೀರ್ಮಾನ : ಸ್ಟೇಟ್‌ಮೆಂಟ್‌ನ ರಶೀದಿಯ ದಿನದಿಂದ 21 ದಿನ ಮುಂಚಿತವಾಗಿ ಬಿಲ್ಲಿಂಗ್‌ನಲ್ಲಿ ಯಾವುದೇ ರೀತಿಯ ವಿವಾದವಿದ್ದಲ್ಲಿ ಬ್ಯಾಂಕ್‌ನ ಗಮನಕ್ಕೆ ತರತಕ್ಕದ್ದು. ಡಿಸ್ಪ್ಯೂಟ್ ಡಿಕ್ಲರೇಶನ್ ಫಾರಂ (DDF) ಅಥವಾ ಯಾವುದೇ ರೀತಿಯ ದಾಖಲೆಗಳ ಅವಶ್ಯವಿದ್ದಲ್ಲಿ ಅದನ್ನು ಸಹಿಮಾಡಿ ಇಲ್ಲವೇ ಕಾಗದದಲ್ಲಿ ರುಜು ಮಾಡಿ ಕೊಡತಕ್ಕದ್ದು. ತೀರ್ಮಾನದ ವಿಧಾನವು ಸಂದರ್ಭಕ್ಕೆ ಅನುಗುಣವಾಗಿ ಬದಲಾಗುತ್ತದೆ. ಇದರ ಬಗೆಗಿನ ಅಧಿಕ ಮಾಹಿತಿಗಾಗಿ ಮತ್ತು ತೀರ್ಮಾನದ ವಿಧಾನಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳ ಅಗತ್ಯವಿದ್ದಲ್ಲಿ ದಯವಿಟ್ಟು ನಮ್ಮ ಬ್ಯಾಂಕ್ ಕಾರ್ಡ್‌ನ ಹೆಲ್ಪ್‌ಲೈನ್ ಸೆಂಟರ್ ಅಥವಾ ಬ್ಯಾಂಕ್‌ನ ವೆಬ್‌ಸೈಟ್ www.standardchartered.co.inಗೆ ಸಂಪರ್ಕಿಸಿರಿ.

7.ಆ್ಯಡ್ ಆನ್ ಕಾರ್ಡ್ : ಅಕೌಂಟ್ ಒಂದರಲ್ಲಿ ಒಂದು ಕಾರ್ಡಿಗಿಂತ ಹೆಚ್ಚು ಕಾಡ್ ಇಶ್ಯೂ ಮಾಡಲ್ಪಟ್ಟಲ್ಲಿ ಅಕೌಂಟ್‌ನಲ್ಲಿ ಯಾವುದೇ

ಹೆಚ್ಚುವರಿ ಕಾರ್ಡನ್ನು ಹೊಂದಿದವರು ಮತ್ತು ಈ ಕಾರ್ಡ್ ಇಶ್ಯೂ ಮಾಡಲು ಅಧಿಕಾರ ನೀಡಿದ ವೈಯಕ್ತಿಕ ಖಾತೆದಾರರು ಜೊತೆಯಾಗಿ ಹಾಗೂ ಪ್ರತ್ಯೇಕವಾಗಿ ಈ ನಿಯಮ ಮತ್ತು ನಿಬಂಧನೆಗಳಿಗೆ ಬದ್ಧರಾಗಿರುತ್ತಾರೆ. ಹಾಗೂ ಜೊತೆಯಾಗಿ ಮತ್ತು ಪ್ರತ್ಯೇಕವಾಗಿ ಕಾರ್ಡ್/ಗಳ ಬಳಕೆಯಿಂದ ಆದ ಶುಲ್ಕಗಳಿಗೆ ಹೊಣೆಯಾಗಿರುತ್ತಾರೆ.

8. ಕಾರ್ಡ್ ಕಳೆದು ಹೋದಲ್ಲಿ ಅಥವಾ ಕಳವು ಆದಲ್ಲಿ ಕೂಡಲೇ ತಿಳಿಸಿರಿ : ನಿಮ್ಮ ಕಾರ್ಡ್ ಭಾರತದ ಒಳಗೆ ಕಳೆದು ಅಥವಾ ಕಳವು ಆದಲ್ಲಿ ಗ್ರಾಹಕರ ಸಮೀಪದ ಕಸ್ಟಮರ್ ಸರ್ವಿಸ್ ಸೆಂಟರ್ (ಗ್ರಾಹಕರ ಸೇವಾ ಕೇಂದ್ರ) ಹೆಲ್ಪ್‌ಲೈನ್‌ಗೆ ಕೂಡಲೇ ತಿಳಿಸತಕ್ಕದ್ದು. ಒಂದು ವೇಳೆ ಕಾರ್ಡ್ ಹೊರದೇಶದ ಸಂಚಾರದ ಸಮಯದಲ್ಲಿ ಕಳೆದು ಅಥವಾ ಕಳವು ಆದಲ್ಲಿ ಕಾರ್ಡ್ ಧಾರಕರು ಸಮೀಪದ ಬ್ಯಾಂಕ್ ಹೆಲ್ಪ್‌ಲೈನ್ ಅಥವಾ ಮಾಸ್ಟರ್ ಕಾರ್ಡ್ ಅಥವಾ ವೀಸಾ ಹೆಲ್ಪ್‌ಲೈನ್‌ಗೆ ತಿಳಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಾರ್ಡ್ ಮೆಂಬರ್ ರೂಲ್ಸ್ ಆ್ಯಂಡ್ ರೆಗ್ಯುಲೇಶನ್ (ಕಾರ್ಡ್ ಸದಸ್ಯರ ನಿಯಮ ಮತ್ತು ನಿಬಂಧನೆ)ನ್ನು ಗಮನಿಸಿರಿ.

9. ಕಳೆದು ಹೋದ ಕಾರ್ಡ್‌ನ ಜವಾಬ್ದಾರಿ : ಕಾರ್ಡ್ ಕಳೆದು ಹೋದಲ್ಲಿ ಅದನ್ನು ಭಾರತದ ಬ್ಯಾಂಕ್‌ನ ಕಾರ್ಡ್ ಸರ್ವಿಸ್ ಸೆಂಟರ್ ಅಥವಾ ವೀಸಾ/ಮಾಸ್ಟರ್ ಕಾರ್ಡ್ ಗ್ಲೋಬಲ್ ಎಮರ್‌ಜೆನ್ಸಿ ಅಸಿಸ್ಟೆನ್ಸ್ ಹೆಲ್ಪ್‌ಲೈನ್ಸ್‌ಗೆ ತಿಳಿಸುವ ಮುಂಚಿತವಾಗಿ ನಷ್ಟ ಸಂಭವಿಸಿದಲ್ಲಿ ಕಾರ್ಡ್ ಮೆಂಬರ್ ಅದಕ್ಕೆ ಹೊಣೆಗಾರರಾಗುತ್ತಾರೆ. ಕಳೆದು ಹೋದ ಕಳವು ಅಥವಾ ಹಾಳಾದ ಕಾರ್ಡ್‌ನ ಬಗ್ಗೆ ದೂರು ಸಲ್ಲಿಸಿದ ಮೇಲೆ ಒಂದು ವೇಳೆ ಕಾರ್ಡ್ ಸಿಕ್ಕಿದರೆ ಕಾರ್ಡ್ ಮೆಂಬರ್ ಬ್ಯಾಂಕ್‌ಗೆ ಸೂಚಿಸುವ ಮೂಲಕ ಅದನ್ನು ಸಂಪೂರ್ಣವಾಗಿ ನಾಶಮಾಡಿ ಬೆಲೆಯಿಲ್ಲದಂತಾಗಿ ಮಾಡುವ ಜವಾಬ್ದಾರಿಯನ್ನು ಹೊಂದಿದ್ದಾರೆ.

10. ಸ್ಟೇಟ್‌ಮೆಂಟ್ ಪ್ರಕಟಣೆ : ಅಕೌಂಟ್‌ನಲ್ಲಿ ರೂ. 100 ಕ್ಕಿಂತ ಹೆಚ್ಚು ಬ್ಯಾಲೆನ್ಸ್ ಇದಲ್ಲಿ ಪ್ರತೀ ತಿಂಗಳು ಸ್ಟೇಟ್‌ಮೆಂಟ್ ಪ್ರಕಟಗೊಳ್ಳುತ್ತದೆ. ಅಕೌಂಟ್‌ನಲ್ಲಿ ಬ್ಯಾಲೆನ್ಸ್ ರೂ. 100 ಕ್ಕಿಂತ ಕಡಿಮೆ ಇದಲ್ಲಿ ಹೊಸ ಟ್ರ್ಯಾನ್‌ಝ್ಯಾಕ್ಷನ್ ಆದ ನಂತರವೇ ಸ್ಟೇಟ್‌ಮೆಂಟ್ ಪ್ರಕಟವಾಗುವುದು. ಒಂದು ವೇಳೆ ಕಾರ್ಡ್ ಮಾಲೀಕನ ಅಕೌಂಟ್‌ನಲ್ಲಿ ಕ್ರೆಡಿಟ್ ಬ್ಯಾಲೆನ್ಸ್ ಇದ್ದರೆ, ಕ್ರೆಡಿಟ್ ಬ್ಯಾಲೆನ್ಸ್ INR 250ಕ್ಕಿಂತ ಹೆಚ್ಚಾದಾಗ ಮಾತ್ರ ಸ್ಟೇಟ್‌ಮೆಂಟ್ ಬಿಡುಗಡೆಗೊಳ್ಳುತ್ತದೆ.

11. ಕಾರ್ಡ್‌ನ ನಿಯಮ ಮತ್ತು ನಿಬಂಧನೆಗಳ ತಿದ್ದುಪಡಿ : ಕಾರ್ಡ್‌ನ ನಿಯಮ ಮತ್ತು ನಿಬಂಧನೆಗಳಲ್ಲಿ ನಿಯಮ 18(b)ಯ ತಿದ್ದುಪಡಿ ಈ ಕೆಳಗಿನಂತಿದೆ : ''18(b) : ಕಾರ್ಡ್ ಬಿಲ್ಲಿಂಗ್ ಸ್ಟೇಟ್‌ಮೆಂಟ್ ಸೇರಿದಂತೆ ಕಾರ್ಡ್ ಮೆಂಬರಿಗೆ ಬ್ಯಾಂಕ್ ಕಳುಹಿಸಿದ ಎಲ್ಲಾ ದಾಖಲೆಗಳು /ಪತ್ರಗಳು ಕಾರ್ಡ್‌ಮೆಂಬರಿಗೆ ಸರಿಯಾಗಿ ತಲುಪಿಸಲಾಗಿದೆ ಎಂದು ತಿಳಿಯಲಾಗುತ್ತದೆ ಆದರೆ ಸ್ಟೇಟ್‌ಮೆಂಟ್‌ನ ಹಿಂಬದಿಯಲ್ಲಿ ಈ ಬಗ್ಗೆ ತಿಳಿಸಬೇಕು ಅಥವಾ ಪರ್ಸನಲ್ ಕೊರಿಯರ್ ಅಥವಾ ಭಾರತದಲ್ಲಿ ನೋಂದಾಯಿಸಲ್ಪಟ್ಟ ಕಾಡ್‌ಮೆಂಬರರ ವಿಳಾಸಕ್ಕೆ ಆರ್ಡಿನರಿ ಪೋಸ್ಟ್‌ನಲ್ಲಿ ಕಳುಹಿಸಬೇಕು ಈ ಸೇವೆಯು ಪೋಸ್ಟ್ ಅಥವಾ ನೋಟಿಸು ಅಥವಾ ಕೊರಿಯರ್ ಮೂಲಕ ತಿಳಿಸಿದ ನಾಲ್ಕನೇ ದಿನದಂದು ಕೊನೆಗೊಳ್ಳುತ್ತದೆ. ಈ ಸಮಯದಲ್ಲಿ ಕಾರ್ಡ್‌ಮೆಂಬರ್ ವಿಳಾಸವನ್ನು ಭಾರತದ ಹೊರಗೆ ನೋಂದಾಯಿಸಬಹುದು, ಬ್ಯಾಂಕ್‌ನ ಒಪ್ಪಿಗೆಯ ಮೇರೆಗೆ ಕಾರ್ಡ್‌ಮೆಂಬರ್ ಕಾರ್ಡ್ ಸ್ಟೇಟ್‌ಮೆಂಟ್‌ನ್ನು ಕಳುಹಿಸಿ ಆತನ ಕಾರ್ಡ್‌ನಲ್ಲಿ ಬ್ಯಾಂಕಿಗೆ ಕೊಡಬೇಕಾದ ಹಣವನ್ನು ಕೊನೆಯ ದಿನಾಂಕದ ಮೊದಲು ಪಾವತಿಸುವುದು ಆತನ ಜವಾಬ್ದಾರಿಯಾಗಿದೆ.'' ಈ ಸ್ಟೇಟ್‌ಮೆಂಟನ್ನು ಇ-ಮೇಲ್ ಮೂಲಕ ಕೂಡಾ ಕಳುಹಿಸಬಹುದು (ಕಾರ್ಡ್‌ಮೆಂಬರ್ ಇ-ಸ್ಟೇಟ್‌ಮೆಂಟ್‌ಗೆ ನೋಂದಾಯಿಸಿದರೆ ಮಾತ್ರ).

12. ಟರ್ಮಿನೇಶನ್ (ಸಮಾಪ್ತಿ) : ಅಕೌಂಟ್ ಧಾರಕರು ತಮ್ಮ ಕಾರ್ಡ್ ಅಕೌಂಟನ್ನು ಬ್ಯಾಂಕ್‌ನ ಕಾರ್ಡ್ ಸರ್ವಿಸ್ ಸೆಂಟರ್ ಅಥವಾ ಬ್ಯಾಂಕ್‌ಗೆ ದೂರವಾಣಿ ಕರೆ ಅಥವಾ ಕಾಗದ ಪತ್ರಗಳ ಮೂಲಕ ತಿಳಿಸಿ ಸಮಾಪ್ತಿಗೊಳಿಸಬಹುದು. ಈ ರೀತಿಯ ನೋಟೀಸು ಕಾರ್ಡ್‌ಮೆಂಬರ್ ಸಂಪೂರ್ಣ ಕೊಡಬೇಕಾದ ಹಣವನ್ನು ಪಾವತಿಸಿದ ಮೇಲೆ ಮತ್ತು ಬ್ಯಾಂಕ್‌ನ ಕಾರ್ಡ್ ಸರ್ವಿಸ್ ಸೆಂಟರ್‌ಗೆ ಅಥವಾ ಬ್ಯಾಂಕ್‌ಗೆ ತಿಳಿಸಿ ಕಾರ್ಡನ್ನು ನಾಶ ಮಾಡಿದಾಗ ಅನ್ವಯವಾಗುತ್ತದೆ.

13. ಕ್ರೆಡಿಟ್ ಲಿಮಿಟ್ (ಸಾಲ ಮಿತಿ) : ಬ್ಯಾಂಕ್ ವಿವೇಕದಿಂದ ಸಾಲದ ಮಿತಿಯನ್ನು ಗೊತ್ತು ಮಾಡುತ್ತದೆ. ಒಟ್ಟು ಸಾಲದ ಮಿತಿಯಲ್ಲಿ ಉಪಯೋಗಿಸಿದ ಸಾಲವನ್ನು ಕಳೆದು ಉಳಿದ ಸಾಲದ ಮಿತಿಯನ್ನು ಲೆಕ್ಕ ಹಾಕಲಾಗುವುದು. ಒಂದು ವೇಳೆ ಕಾರ್ಡ್‌ಮೆಂಬರ್ ಕಾರ್ಡ್‌ನ ಸಾಲ ಮಿತಿಯನ್ನು ಬಿಟ್ಟು ಹೆಚ್ಚಿಗೆ ಸಾಲ ಪಡೆದಿದ್ದರೆ, ಆ ಹಣವನ್ನು ಕೂಡಾ ಕಳೆದು ಉಳಿದ ಸದ್ಯದ ಸಾಲ ಮಿತಿಯನ್ನು ಅಂದಾಜುಮಾಡಲಾಗುತ್ತದೆ. ಬ್ಯಾಂಕ್ ತಮ್ಮದೇ ನಿಯಮದ ಮೇರೆಗೆ ನಿಮ್ಮ ಸಾಲದ ಮಿತಿಯನ್ನು ಕಮ್ಮಿ ಮಾಡುವ ಹಕ್ಕನ್ನು ಸದಾ ಹೊಂದಿರುತ್ತಾರೆ. ಹೆಚ್ಚು ಹಣದ ಉಪಯೋಗ ಕಾರ್ಡ್ ತೆಗೆದುಕೊಂಡ 90 ದಿನದ ಮುಂಚಿತವಾಗಿ ಆಭರಣಗಳ ಖರೀದಿ, ಹಣ

ಮರುಪಾವತಿಯಲ್ಲಿ ಅಡಚಣೆ, ಮಿತಿಗಿಂತ ಹೆಚ್ಚಿನ ಉಪಯೋಗ ಇವುಗಳಲ್ಲಿ ಕೆಲವು ಆಗಿವೆ. ಯಾವಾಗ ಮತ್ತು ಹೇಗೆ ಸಾಲದ ಮಿತಿಯನ್ನುಕಮ್ಮಿಮಾಡಲಾಗುವುದು ಎಂಬುದರ ಬಗ್ಗೆ ಬ್ಯಾಂಕ್ ನಿಮಗೆ ತಿಳಿಯಗೊಳಿಸುತ್ತದೆ.

14. ಕ್ಯಾಶ್ ಎಡ್ವಾನ್ಸ್ ಲಿಮಿಟ್ (ಮುಂಚಿತವಾಗಿ ಕೊಡುವ ಹಣದ ಮಿತಿ) : ಕ್ರೆಡಿಟ್ ಲಿಮಿಟ್‌ನಲ್ಲಿ ಬ್ಯಾಂಕ್ ಮುಂಚಿತವಾಗಿ ಕೊಡುವ ಶೇಕಡಾ ಹಣವನ್ನು ನಿಗದಿ ಪಡಿಸುವುದಿಲ್ಲ, ಇದನ್ನು ಪ್ರತಿ ತಿಂಗಳು ಲೆಕ್ಕಾಚಾರ ಮಾಡಿ ಗೊತ್ತು ಮಾಡಲಾಗುವುದು. ಇದರ ಬಗೆಗಿನ ಹೆಚ್ಚಿನ ಮಾಹಿತಿ ಮತ್ತು ಶುಲ್ಕಗಳಿಗೆ ಕಾರ್ಡ್ ಸರ್ವಿಸ್ ಸೆಂಟರ್‌ಗೆ ದಯವಿಟ್ಟು ಸಂಪರ್ಕಿಸಿರಿ.

15. ಇನ್‌ಫೋರ್‌ಮೇಶನ್ ಶೇರಿಂಗ್ (ಮಾಹಿತಿಯನ್ನು ಹಂಚಿಕೊಳ್ಳುವುದು) : ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ಕಾರ್ಡ್‌ಧಾರಕರ ನಿಯಮ ಮತ್ತು ನಿಬಂಧನೆಗಳ ಒಪ್ಪಿಗೆಯ ಪ್ರಕಾರ ಕಾರ್ಡ್‌ಮೆಂಬರ್‌ನ ಅಕೌಂಟ್‌ನ ಯಾವುದೇ ರೀತಿಯ ವಿಷಯವನ್ನು ಭಾರತದ ಒಳಗಿರುವ ಅಥವಾ ಹೊರಗಿರುವ ಇತರ ಕಂಪನಿ ಅಥವಾ ಮಾರುವವರ ಜೊತೆಗೆ ಹಂಚಿಕೊಳ್ಳಬೇಕು. ಕಾರ್ಡ್‌ನ ಮಾಹಿತಿಗಳನ್ನು ಕ್ರೆಡಿಟ್ ಇನ್‌ಫೋರ್‌ಮೇಶನ್ ಬ್ಯೂರೋ (ಇಂಡಿಯಾ) ಲಿಮಿಟೆಡ್ (CIBIL)ಗೂ ತಿಳಿಸುವ ಹಕ್ಕನ್ನು ಬ್ಯಾಂಕ್ ಹೊಂದಿದೆ ಅಥವಾ ಕಾರ್ಡ್‌ನ ಮಾಹಿತಿಯನ್ನು ಇತರ ಏಜೆನ್ಸಿಗಳಿಗೆ ತಿಳಿಸುವ, ಕಾರ್ಡ್ ಮೆಂಬರ್‌ನ ವಿಷಯ ಸಾಲ ಸೌಲಭ್ಯಗಳು ಸಿಗುವ /ಇನ್ನೂ ಸಿಗಲಿರುವ, ಕಾರ್ಡ್‌ನ ಹಣ ಪಾವತಿಯ ಹೊಣೆಗಾರಿಕೆ ಇರುವ / ಇಲ್ಲದಿರುವ ಕಾರ್ಡ್ ಧಾರಕರ ಮಾಹಿತಿಗಳನ್ನು ಕೂಡಾ ಹೇಳುವ ಅಧಿಕಾರವನ್ನು ಹೊಂದಿರುತ್ತದೆ. ಅದೂ ಅಲ್ಲದೆ ಕ್ರೆಡಿಟ್ ಇನ್‌ಫೋರ್‌ಮೇಶನ್ ಕಂಪನೀಸ್ (ರೆಗ್ಯುಲೇಶನ್) ಆ್ಯಕ್ಟ್ 2005ರ ಪ್ರಕಾರ ಕಾರ್ಡ್‌ಮೆಂಬರಿಗೆ ತಿಳಿಸದೆ ಕಾನೂನಿನ ಆಧಾರದ ಮೇಲೆ ಬೇರೆ ಅಧಿಕಾರಿಗಳಿಗೆ ಯಾವುದೇ ರೀತಿಯ ವಿಷಯದ ಬಗ್ಗೆ ಬೇಡಿಕೆ ಮತ್ತು ಒತ್ತಾಯವಿದ್ದಲ್ಲಿ ಅದನ್ನು ಹೇಳುವ ಅಧಿಕಾರವನ್ನು ಬ್ಯಾಂಕ್ ಹೊಂದಿರುತ್ತದೆ. ಈ ಉದ್ದೇಶಕ್ಕಾಗಿ ಬ್ಯಾಂಕ್ ವಿಶೇಷವಾಗಿ ತರಬೇತು ಪಡೆದವರು ಅಥವಾ ಏಜೆಂಟ್‌ಗಳ ಜೊತೆಗೂಡಿ ಸೇವೆಸಲ್ಲಿಸಬಹುದು. ಈ ರೀತಿ ಬ್ಯಾಂಕ್ ಕಾರ್ಡ್‌ಧಾರಕರ ಅಕೌಂಟ್‌ನ ಯಾವುದೇ ಬೇಕಾದ ವಿಷಯಗಳನ್ನು ನಿಶ್ಚಯಿಸಿ ತರಬೇತಿ ಪಡೆದವರಿಗೆ/ ಏಜೆಂಟ್‌ಗಳಿಗೆ ಹೇಳುವ ಒಪ್ಪಂದವನ್ನು ಮಾಡುತ್ತಾರೆ.

16. ಡಿಫೋಲ್ಟ್ ಮತ್ತು ಪರಿಸ್ಥಿತಿಯ ಮಾಹಿತಿಗಳು :

(ಎ) ಕಾರ್ಡ್‌ಮೆಂಬರ್ 150 ದಿನಗಳೊಳಗೆ ಹಣ ಪಾವತಿ ಮಾಡದಿದ್ದಲ್ಲಿ ಆತನನ್ನು ಡಿಫೋಲ್ಟರ್ ಎಂದು ಪರಿಗಣಿಸಲಾಗುವುದು. ಪ್ರತಿ ತಿಂಗಳಲ್ಲಿಯೂ ಹಣ ಪಾವತಿಯ ವಿಷಯಗಳನ್ನು ಕ್ರೆಡಿಟ್ ಇನ್‌ಫೋರ್‌ಮೇಶನ್ ಬ್ಯೂರೋ (ಇಂಡಿಯಾ) ಲಿಮಿಟೆಡ್ (CIBIL)ನೊಂದಿಗೆ ಹಂಚಲಾಗಿದ್ದು, ಹಣಪಾವತಿಯಲ್ಲಿ ಯಾವುದೇ ಡಿಫೋಲ್ಟ್ ಆದರೂ ಅದು CIBILನಲ್ಲಿ ಕಂಡು ಬರುವುದು. ಹಣ ಪಾವತಿ ಮಾಡುವಲ್ಲಿ ತಪ್ಪು ಆದಾಗ ಅದರ ಎಲ್ಲಾ ವಿಷಯಗಳನ್ನು ಸತ್ಯಮ್‌ನವರು ಸಂಗ್ರಹಿಸಿರುತ್ತಾರೆ. ಈ ಎಲ್ಲಾ ಮಾಹಿತಿಗಳನ್ನು ಕೊಡಬೇಕಾದ ಪಾವತಿಯು 150 ದಿನದಲ್ಲಿ ಕೊಡದಿದ್ದರೆ, ಬ್ಯಾಂಕ್‌ನವರೊಂದಿಗೆ ಸತ್ಯಮ್‌ನವರು ಹಂಚಿಕೊಳ್ಳುತ್ತಾರೆ.

(ಬಿ) ಪಾವತಿ ಕೊಡುವುದರ ವ್ಯವಸ್ಥೆಯಾದ ಮೇಲೆ ಡಿಫೋಲ್ಟರ್‌ನವರ ವಿಂಗಡಣೆ ಮತ್ತು ಹಿಂದೆಗೆತ : ಸಂಪೂರ್ಣವಾಗಿ ಕೊಡಬೇಕಾದ ಪಾವತಿಯ ವಿಷಯದಲ್ಲಿ ಮತ್ತು ಬೇಡಿಕೆಯಲ್ಲಿ ಪ್ರತಿ ತಿಂಗಳೂ ಬ್ಯಾಂಕ್ ಡಿಫೋಲ್ಟರ್‌ನವರ ಹೆಸರನ್ನು ಡಿಫೋಲ್ಟರರ ಪಟ್ಟಿಯಿಂದ ತೆಗೆಯುತ್ತದೆ. ಆದರೆ CIBILನ ಜೊತೆಗೆ ಹಂಚಿಕೊಂಡ ಪಾವತಿಯ ಅಥವಾ ಕ್ರೆಡಿಟ್‌ನ ಯಾವುದೇ ವಿಷಯವನ್ನು ಬ್ಯಾಂಕ್‌ನವರು ಅವರಿಂದ ಹಿಂದಕ್ಕೆ ತೆಗೆದುಕೊಳ್ಳಲು ಆಗುವುದಿಲ್ಲ.

(ಸಿ) ಡಿಫೋಲ್ಟ್ ಆದಾಗ ವಸೂಲಿ ಮಾಡುವ ವಿಧಾನ : ನಿರಂತರವಾಗಿ ಕಾಗದ ಪತ್ರಗಳು, ದೂರವಾಣಿಕರೆ, ಎಸ್‌ಎಮ್‌ಎಸ್, ಇಮೇಲ್ ಅಥವಾ ಇತರ ಸಮೂಹ ಮಾಧ್ಯಮದ ಮೂಲಕ ನೆನಪಿಸುವುದು ಅಥವಾ ಅಗತ್ಯವಿದ್ದಲ್ಲಿ ವೈಯಕ್ತಿಕವಾಗಿ ನೋಡುವುದು.

(ಡಿ) ಮರಣದ ಸಂದರ್ಭದಲ್ಲಿ ಹಣ ವಸೂಲಿ / ಕಾರ್ಡ್ ಧಾರಕರು ಶಾಶ್ವತವಾಗಿ ಅನರ್ಹರಾದಾಗ ಕಾರ್ಡ್ ಧಾರಕನ ಮರಣದ ಸಂದರ್ಭದಲ್ಲಿ ಆತನ ಅಕೌಂಟನ್ನು ಪುಸ್ತಕದಿಂದ ತೆಗೆದು ಹಾಕಾಲಾಗುವುದು ಮತ್ತು ಕೊಡಬೇಕಾದ ಸಾಲವನ್ನು ಕೆಟ್ಟ ಸಾಲ ಎಂದು ಪರಿಗಣಿಸಲಾಗುವುದು. ಕಾರ್ಡ್‌ಧಾರಕರ ಸಂಬಂಧಿಕರು ಇಚ್ಚಿಸಿದರೆ ಕೊಡಬೇಕಾದ ಪಾವತಿಯಲ್ಲಿ ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳಬಹುದು. ಒಂದು ವೇಳೆ ಶಾಶ್ವತವಾಗಿ ಅನರ್ಹರಾದಲ್ಲಿ ಸ್ಟ್ಯಾಂಡರ್ಡ್ ಕಾರ್ಡ್‌ಮೆಂಬರ್‌ನ ನಿಯಮ ಮತ್ತು ನಿಬಂಧನೆಗಳು ಅನ್ವಯಿಸುತ್ತದೆ.

17. ಗ್ರಿವೆನ್ಸ್ ಎಸ್ಕಲೇಶನ್ : ನಿಮಗೆ ನೊರಕಿದ ಪ್ರತಿಕ್ರಿಯೆಯ ಬಗ್ಗೆ ಅಸಮಾಧಾನವಿದ್ದಲ್ಲಿ, ದಯವಿಟ್ಟು CDK ಸಾಯಿ ನಾರಾಯಿನ್, ಹೆಡ್ ಸರ್ವಿಸ್ ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ಕಸ್ಟಮರ್ ಕೇರ್ ಯುನಿಟ್, 19 , ರಾಜಾಜಿ ಸಾಲಾಯಿ, ಚೆನ್ನೈ 600 001 ಇವರಿಗೆ ಬರೆದು ಕಳುಹಿಸಿರಿ. ಫೋನ್ : +91 99002 60046 ಅಥವಾ ಇಮೇಲ್ head.service@in.standardchartered.com

18. ರಿಸರ್ವ ಬ್ಯಾಂಕ್ ಆಫ್ ಇಂಡಿಯಾ ಮತ್ತು ಬ್ಯಾಂಕ್‌ನ ಯಾವುದೇ ರೀತಿಯ ಬೇಡಿಕೆಗಳನ್ನು ನೊ ಯುವರ್ ಕಸ್ಟಮರ್ (KYC) (ನಿಮ್ಮ ಗ್ರಾಹಕರ ಬಗ್ಗೆ ತಿಳಿದುಕೊಳ್ಳುವುದು) ನ ಮೂಲಕ ಸಮಯಕ್ಕೆ ಸರಿಯಾಗಿ ಸ್ವೀಕರಿಸಿ ಬ್ಯಾಂಕಿಗೆ ಬೇಕಾದ ದಾಖಲೆಗಳನ್ನು ನಾನು ಕೊಡಲು ಒಪ್ಪಿರುತ್ತೇನೆ. ಈ ಸೌಲಭ್ಯವನ್ನು ಹಿಂದಕ್ಕೆ ತೆಗೆದು ಕೊಳ್ಳುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ. ರಕ್ಷಣೆ ಮತ್ತು ಬರಸವೆ ಕೊಡುವ ಹಣ ಕೊಡಬೇಕಾಗಿ ಇದ್ದಲ್ಲಿ ಬಂದ ಹಣ ಮತ್ತು ಉಳಿದ ಬ್ಯಾಲೆನ್ಸ್‌ನ್ನು ನಿಮ್ಮಿಂದ ತೆಗೆದುಕೊಳ್ಳುವ ಅಕೌಂಟ್ ಇದ್ದಲ್ಲಿ ಅದನ್ನು ಮುಚ್ಚಲು ಬೇಕಾದ ಎಲ್ಲಾ ದಾಖಲೆಗಳನ್ನು ಬ್ಯಾಂಕಿಗೆ ನೀವು ಕೊಡಲು ಆಗುವುದಿಲ್ಲ.

19. ಇಷ್ಟಾದರೂ ಇನ್ನೇನಾದರೂ ಇದರಲ್ಲಿ ಒಳಗೊಂಡಿದ್ದರೆ, ಸೌಲಭ್ಯವು ಕೇವಲ ಬ್ಯಾಂಕಿನ ತೀರ್ಮಾನದ ಪ್ರಕಾರ ಲಭ್ಯವಿದ್ದು ಇದು ರದ್ದುಗೊಳ್ಳಬಹುದು ಅಥವಾ ಕೊಡಬೇಕಾದ ಪಾವತಿನ್ನು ಯಾವುದೇ ಸಮಯದಲ್ಲಿ ಬ್ಯಾಂಕ್‌ನ ಬೇಡಿಕೆಯ ಮೇರೆಗೆ ಕೊಡಬೇಕಾದಲ್ಲಿ ಗ್ರಾಹಕರು ಇದನ್ನು ಬ್ಯಾಂಕಿಗೆ ಮರುಪಾವತಿ ಮಾಡಬೇಕಾಗುತ್ತದೆ.

20. ಯಾವುದೇ ಪ್ರಾದೇಶಿಕ 10 ಭಾಷೆಗಳಲ್ಲಿ ಕಾರ್ಡ್‌ಮೆಂಬರ್ ನಿಯಮ ಮತ್ತು ನಿಬಂಧನೆಗಳನ್ನು ಓದಲು ದಯವಿಟ್ಟು http://www.standardchartered.com/in/cb/creditcard/card_main.html ಆ್ಯಕ್ಸೆಸ್ ಮಾಡಿ.

ಪರಿಣಾಮಕಾರಿ ಶುಲ್ಕಗಳು ಜೂನ್ 2006 :

• ಲೇಟ್ ಫೀ ಚಾರ್ಜಸ್ (ತಡವೇತನದ ಶುಲ್ಕ) : ತಡವಾದ ವೇತನ ರೂ. 100/-ನ್ನು ನಿರಂತರವಾಗಿ ಎರಡು ಅಥವಾ ಮೂರು ತಿಂಗಳುಗಳ ಕಾಲ ಕೊಡಬೇಕಾದ ಕನಿಷ್ಠ ಹಣವನ್ನು ಕೊಡದಿದ್ದಲ್ಲಿ ನಿಮ್ಮ ಸಾಲಕ್ಕೆ ಸೇರಿಸಲಾಗುವುದು.

• ಮರು ಶುಲ್ಕ (ಹೆಚ್ಚು ಶುಲ್ಕ) : ರೈಲ್ವೆ ಟ್ರ್ಯಾನ್‌ಝಾಕ್ಷನ್‌ನಲ್ಲಿ ರೂ. 25/- ಅಥವಾ 2.5% ಟ್ರ್ಯಾನ್‌ಝಾಕ್ಷನ್ (ಯಾವುದು ಹೆಚ್ಚಿರುವುದೊ ಅದಕ್ಕೆ) ಪೆಟ್ರೋಲ್ ಟ್ರ್ಯಾನ್‌ಝಾಕ್ಷನ್ ರೂ. 10/- ಅಥವಾ 2.5% ಟ್ರ್ಯಾನ್‌ಝಾಕ್ಷನ್ (ಯಾವುದು ಹೆಚ್ಚಿರುವುದೊ ಅದಕ್ಕೆ).

• ಮಿತಿ ಮೀರಿದ ಶುಲ್ಕ : ಮಿತಿ ಮೀರಿದ ಶುಲ್ಕ ಪ್ರತಿ ಉದಾಹರಣೆಗೂ ರೂ. 500/-

• ಡ್ಯೂಪ್ಲಿಕೇಟ್ ಸ್ಟೇಟ್‌ಮೆಂಟ್ ಶುಲ್ಕ : ಪ್ರತಿ ಸ್ಟೇಟ್‌ಮೆಂಟ್‌ಗೆ ರೂ. 25/- (ಅದು 3 ತಿಂಗಳಿಗಿಂತ ಹಳೆಯದಾಗಿದ್ದಲ್ಲಿ).

• ಕಾರ್ಡ್ ಮರು ಬದಲಾವಣೆಯ ಶುಲ್ಕ : ಪ್ರತಿ ಬದಲಾವಣೆಗೆ ರೂ. 100/-

• ಪಿನ್ ಮರು ಬದಲಾವಣೆ : ಪ್ರತಿ ಮರುಬದಲಾವಣೆಗೆ ರೂ. 100/-

• ಹೊರ ಪ್ರದೇಶದ ಟೆಲಿಡ್ರಾಫ್ಟ್ ಶುಲ್ಕ : ಪ್ರತಿ ಸಂದರ್ಭದಲ್ಲಿ ರೂ. 100/-

• ಟೆಲಿಡ್ರಾಫ್ಟ್ ರದ್ದುಪಡಿಸಿದ ಶುಲ್ಕ : ಪ್ರತಿ ಸಂದರ್ಭದಲ್ಲಿ ರೂ. 50/-

• ಚೆಕ್ ಹಿಂದಕ್ಕೆ ಬಂದ ಶುಲ್ಕ : ಪ್ರತಿ ಸಂದರ್ಭದಲ್ಲಿ ರೂ. 300/-

• ಹೊರದೇಶಗಳ ಕರೆನ್ಸಿ ಟ್ರ್ಯಾನ್‌ಝಾಕ್ಷನ್ : ಫ್ರಾನ್‌ಚೈಸಿ (ವೀಸಾ/ಮಾಸ್ಟರ್)ನ ಆದೇಶದಂತೆ ಎಲ್ಲಾ ಹೊರದೇಶದ ರೂಪಾಯಿಯ ಟ್ರಾನ್‌ಝಾಕ್ಷನನ್ನು ಭಾರತದ ರೂಪಾಯಿಗೆ ಬದಲಾಯಿಸಬೇಕಾಗುತ್ತದೆ ಟ್ರ್ಯಾನ್‌ಝಾಕ್ಷನ್‌ಗೆ ಬ್ಯಾಂಕ್ 2.5% ಹೆಚ್ಚು ಮತ್ತು ಫ್ರಾನ್‌ಚೈಸಿಗೆ ಭರ್ತಿ ಮಾಡಲು 1% ಶುಲ್ಕವನ್ನು ಸೇರ್ಪಡಿಸಲಾಗುವುದು.

• ಬ್ರ್ಯಾಂಚ್ ಟ್ರ್ಯಾನ್‌ಝಾಕ್ಷನ್ ಶುಲ್ಕ : ಸಿಗುವ ಸೌಲಭ್ಯಗಳನ್ನು ಉಪಯೋಗಿಸಿ SCBಯ ಬ್ರಾಂಚ್‌ಗೆ ಪ್ರತಿ ಬಾರಿಯೂ ರೂ. 99ನ್ನು ಪಾವತಿಸಬೇಕಾಗುತ್ತದೆ.

• ಸರ್ವಿಸ್ ತೆರಿಗೆ : ಸರ್ವಿಸ್ ಶುಲ್ಕದ ಮೇಲೆ 12.36% ದಷ್ಟು ಸರ್ವಿಸ್ ತೆರಿಗೆಯನ್ನು ಹೇರಲಾಗುವುದು. ಸರ್ವಿಸ್ ಟ್ಯಾಕ್ಸ್ ರಿಜಿಸ್ಟ್ರೇಶನ್ ನಂ. ST/Mumbai/CDCOS/Dn I/13/2006ರಂತೆ "ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್, ಜಾರ್ಜ್ ಕಾರ್ಡ್ ಅಥವಾ ಬೇರೆ ಪಾವತಿಯ ಕಾರ್ಡ್ ಸರ್ವಿಸೆಸ್" ರಿಜಿಸ್ಟರ್ಡ್ ಆಫೀಸು ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್, 23-25, ಎಮ್.ಜಿ. ರೋಡ್, ಫೋರ್ಟ್, ಮುಂಬಯಿ - 400 001. ಸರ್ವಿಸ್ ತೆರಿಗೆಯ ನಂಬರ್‌ನಲ್ಲಿ ಕ್ರೆಡಿಟ್‌ನ್ನು ಕೇಳಬಹುದು ಗ್ರಾಹಕರು CENVAT ಕ್ರೆಡಿಟ್ ರೂಲ್ಸ್ 2004ರಿಂದ ಶುಲ್ಕವನ್ನು ಬಿಟ್ಟುಬಿಡಬಹುದು ಅಥವಾ ಬದಲಾಯಿಸಬಹುದು.

ಪರಿಣಾಮಕಾರಿ ಶುಲ್ಕಗಳು 18 ಜೂನ್ 2007

• ತಡಪಾವತಿ ಶುಲ್ಕಗಳು : ಸ್ಟೇಟ್‌ಮೆಂಟ್‌ನಲ್ಲಿ ಕೊಡಬೇಕಾದ ಹಣ ರೂ. 10,000/-ಗಿಂತ ಕಡಿಮೆ ಇದ್ದರೆ ರೂ. 350/-

• ಸ್ಟೇಟ್‌ಮೆಂಟ್‌ನಲ್ಲಿ ಕೊಡಬೇಕಾದ ಹಣ ರೂ. 10,000/-ದಿಂದ 20,000/-ದ ಒಳಗೆ ಇದ್ದರೆ ರೂ. 500/-

• ಸ್ಟೇಟ್‌ಮೆಂಟ್‌ನಲ್ಲಿ ಕೊಡಬೇಕಾದ ಹಣ ರೂ. 20,000/–ಕ್ಕಿಂತ ಹೆಚ್ಚಾಗಿದ್ದಲ್ಲಿ ರೂ. 600/–

ಉದಾಹರಣೆ : ಕ್ರೆಡಿಟ್ ಕಾರ್ಡ್ ಅಕೌಂಟ್‌ನಲ್ಲಿ ಕೊಡಬೇಕಾದ ಹಣ ರೂ. 7000/– ಮತ್ತು ಬ್ಯಾಲೆನ್ಸ್ ಟ್ರಾನ್ಸ್‌ಫರ್ ಅಕೌಂಟ್‌ನಲ್ಲಿ ರೂ. 15,000 ಮತ್ತು ಹಣ ಪಾವತಿ ಮಾಡುವ ದಿನಾಂಕದಂದು ಪಾವತಿ ಮಾಡದಿದ್ದರೆ, ತಡ ಪಾವತಿ ಶುಲ್ಕವನ್ನು ಕ್ರೆಡಿಟ್ ಕಾರ್ಡ್ ಅಕೌಂಟ್‌ಗೆ ರೂ. 350/–, ಬ್ಯಾಲೆನ್ಸ್ ಟ್ರಾನ್ಸ್‌ಫರ್ ಅಕೌಂಟ್‌ಗೆ ರೂ. 500 ಕೊಡಬೇಕಾಗುತ್ತದೆ. ಈ ಮೇಲಿನ ಉದಾಹರಣೆ ವಿವರಿಸುವ ಉದ್ದೇಶದಿಂದ ಹೇಳಿದ್ದೇವೆ. ಎಲ್ಲಾ ಕಾರ್ಡ್ ಮತ್ತು ಕಂತುಗಳಲ್ಲಿ ಕೊಡುವ ಉತ್ಪನ್ನಗಳೆಂದರೆ ಇನ್‌ಸ್ಟಾಬೈ, ಬ್ಯಾಲೆನ್ಸ್ ಟ್ರಾನ್ಸ್‌ಫರ್, ಡಯಲ್–ಅ–ಲೋನ್ ಇತ್ಯಾದಿ ಪಾವತಿಯನ್ನು ಕೋಡಬೇಕಾದ ದಿನಾಂಕದಲ್ಲಿ ಕೊಡದಿದ್ದರೆ ತಡಪಾವತಿ ಶುಲ್ಕ (ಲೇಟ್ ಪೇಮೆಂಟ್ ಜಾರ್ಜಸ್)ಗಳನ್ನು ಹಾಕಲಾಗುವುದು.

• ಕ್ಯಾಶ್ ಎಡ್ವಾನ್ಸ್ ಫೀ (ಮುಂಗಡ ಹಣಕ್ಕೆ ಶುಲ್ಕ) : ಎಟಿಎಮ್‌ನಿಂದ ಹಣ ತೆಗೆಯುವುದು : ಕನಿಷ್ಠ ರೂ. 300ರಲ್ಲಿ 3% ಹಣ ತೆಗೆಯಬಹುದು • ಬ್ಯಾಂಕ್‌ನ ಬ್ರಾಂಚ್‌ನಲ್ಲಿ ಹಣ ಎಣಿಸುವ ಸೌಲಭ್ಯದಲ್ಲಿ ರೂ. 500ರನ್ನು ತೆಗೆಯಬಹುದು.

ಪರಿಣಾಮಕಾರಿ ಶುಲ್ಕಗಳು 15 ಸೆಪ್ಟೆಂಬರ್ 2007

• ಉಪಯೋಗಿಸದ ಶುಲ್ಕ : ಕಳೆದ 12 ತಿಂಗಳುಗಳಿಂದ ಯಾವುದೇ ರೀತಿಯ ಚಿಲ್ಲರೆ ವ್ಯಾಪಾರ/ಟ್ರ್ಯಾನ್ಸ್‌ಝಾಕ್ಷನ್‌ನಲ್ಲಿ ಕಾರ್ಡ್‌ನ ಉಪಯೋಗ ಮಾಡದಿದ್ದರೆ ರೂ. 250 ಶುಲ್ಕ ಕೊಡಬೇಕಾಗುತ್ತದೆ.

ಸೂಚನೆ : ದಯವಿಟ್ಟು ನಿಮ್ಮ ಚೆಕ್ಸ್ ಮತ್ತು ಡ್ರಾಫ್ಟಗಳು ಎಲ್ಲಾ ವಿಧದಲ್ಲಿಯೂ ಮತ್ತು ಯಾವುದೇ ಬದಲಾವಣೆಗೆ ತಕ್ಕಂತೆ ಸೈನ್ಡ್ ಆಫ್ ಮಾಡಿದೆಯಾ ಎಂಬುದನ್ನು ನೋಡಿಕೋಳ್ಳಿರಿ. ನಿಮ್ಮ ಪಾವತಿಯನ್ನು ಚೆಕ್ ಕಲೆಕ್ಷನ್ ಬಾಕ್ಸ್‌ನಲ್ಲಿ ಪಾವತಿಯನ್ನು ಕೊಡಬೇಕಾದ ದಿನಾಂಕದ 3 ದಿನ ಮುಂಚಿತವಾಗಿ ಹಾಕುವಂತೆ ಪ್ರೊತ್ಸಾಹಿಸುತ್ತೇವೆ. ಅಲ್ಲದೆ ಚೆಕ್‌ನಲ್ಲಿ ನಿಜವಾದ ಪಾವತಿಮಾಡಿದ ದಿನಾಂಕವನ್ನು ಕೂಡಾ ನಮೂದಿಸಬಹುದು. ನಗದು ಹಣವನ್ನು ಕೇವಲ ಬ್ಯಾಂಕ್‌ನ ಶಾಖೆಗಳಲ್ಲಿ ಕಾರ್ಯಾಚರಣೆಯ ಸಮಯದಲ್ಲಿ ಡಿಪಾಸಿಟ್ ಮಾಡಬಹುದು. ದಯವಿಟ್ಟು ಚೆಕ್ ಕಲೆಕ್ಷನ್ ಬಾಕ್ಸ್‌ನಲ್ಲಿ ನಗದು ಹಣ ಡಿಪಾಸಿಟ್ ಮಾಡಬೇಡಿ.